| Form No.4 (Civil) Deposition Sheets (R.P.No.57) |
| --- |

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 56/2020

ಪ್ರಾ.ಸಾ. 8 ಚಾ.ಸಾ. 18

| | | |
| --- | --- | --- |
| ಹೆಸರು | : | ಹೇಮಾವತಿ |
| ಗಂಡ ಹೆಸರು | : | ರಾಜಕುಮಾರ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಪಿ ಎಸ್ ಐ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 05-08-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

2018 ರಿಂದ 2022 ರಿವರೆಗೆ ನಾನು ಗೋಗಿ ಪೋಲೀಸ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕೆಲಸ ಮಾಡಿದ್ದೇನೆ.

2. ನಾನು ಈ ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಪಡೆದು ದಾಖಲೆಗಳನ್ನು ಪರಿಶೀಲಿಸಿ ತನಿಖೆ ಮುಂದುವರೆಸಿ ಎಫ್ ಎಸ್ ಎಲ್ ವರದಿ ಮತ್ತು ಮಾದರಿ ಸೀಲ್ ಪಡೆದು ಕಡತದಲ್ಲಿ ಅಳವಡಿಸಿಕೊಂಡೆನು. ಸದರಿ ಮಾದರಿ ಸೀಲನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ತಮ್ಮ ಸಹಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-14 ಮತ್ತು 15 ಎಂದು ಸಾಕ್ಷಿ ಸಾಹಿಯನ್ನು ನಿಪಿ-14(ಎ) 15(ಎ). ಸರ್ವೆ ಸಂ: 99 ಅರಣಗೇರಾ ಗ್ರಾಮದ ಪಹಣಿ ಪತ್ರಿಕೆಯನ್ನು ಕಡತದಲ್ಲಿ ಅಳವಡಿಸಿಕೊಂಡೆನು. ಸದರಿ ಪಹಣಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ತಮ್ಮ ಸಹಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-16 ಎಂದು ಸಾಕ್ಷಿ ಸಾಹಿಯನ್ನು ನಿಪಿ-16(ಎ). ನಂತರ ಸಮಗ್ರವಾದ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ಆರೋಪ ಸಾಬಿತು ಪಡಿಸಲು ಸಾಕಷ್ಟು ಸಾಕ್ಷ್ಯಗಳು ಸಂಗ್ರಹವಾದ ಹಿನ್ನಲೆಯಲ್ಲಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ ವಿ ವಕೀಲರಿಂದ

3. ನಿಪಿ-16 ರಂತೆ ಸರ್ವೆ ಸಂಃ 99 ರಲ್ಲಿ ತೊಗರಿ ಬೆಳೆ ಬೆಳದಿತ್ತು ಎಂದರೆ ಸಾಕ್ಷಿ ಹತ್ತಿ ಬೆಳೆ ಇತ್ತು ಎಂದು ನುಡಿಯುತ್ತಾರೆ. ನಿಪಿ-16 ರಂತೆ ಸದರಿ ಜಮೀನಿನಲ್ಲಿ ಹತ್ತಿ ಬೆಳೆ ಇತ್ತು ಎಂದು ತೋರಿಸಲು ಯಾವುದೇ ಸಾಕ್ಷಿ ಹಾಜರುಪಡಿಸಿಲ್ಲ ಎಂದರೆ ಸರಿ. ಈ ಪ್ರಕರಣದ ಆರೋಪಿ ವಿಶೇಷ ಚೇತನ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಮುಂದುವರೆದ ತನಿಖೆ ಮಾಡಿಲ್ಲ ಮತ್ತು ಯಾವುದೇ ದಾಖಲೆಗಳನ್ನು ಕಲೆ ಹಾಕದಿದ್ದರೂ ಸುಳ್ಳು ದೋಷಾರೋಪಣಾ ಪಟಿ ಆರೋಪಿತನ ವಿರುದ್ದು ಸಲ್ಲಿ ಸಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.